# ತಾಂತ್ರಿಕಪ್ರಭುತ್ವ

ರಾಜಕೀಯಕ್ಕೆ ಸಂಬಂಧಿಸಿದಂತೆ ಪ್ರಜಾಪ್ರಭುತ್ವ, ಸಮುದಾಯವಾದ, ಸಮಾಜವಾದ, ಬಂಡವಾಳಶಾಹಿ ಆಡಳಿತ ಇವೇ ಮುಂತಾದ ತತ್ತ್ವಗಳ ಬಗ್ಗೆ ಕೇಳಿದ್ದೇವೆ. ಇವಕ್ಕೆ ಸಂಬಂಧಿಸಿದಂತೆ ಅನೇಕ ರಾಜಕೀಯ ಪಕ್ಷಗಳು ಪ್ರಪಂಚದಾದ್ಯಂತ ಕ್ರಿಯಾಶೀಲವಾಗಿವೆ. ಕ್ರಮೇಣ ತತ್ತ್ವ, ಸಿದ್ಧಾಂತ ಮತ್ತು ಆದರ್ಶಗಳು ಗೌಣವಾಗಿ ಕೇವಲ ಪಕ್ಷಗಳು ಮಾತ್ರ ಈಗ ಉಳಿದುಕೊಂಡಿರುವುವು. ಆ ಪಕ್ಷಗಳಿಗೆ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದೇ ಪ್ರಧಾನವಾಗಿ, ಸಿದ್ಧಾಂತ ಗೌಣವಾಗಿದೆ —ಮಾತಿನಲ್ಲಿ ಹೊರತು. ಆ ಪಕ್ಷಗಳೆಲ್ಲವನ್ನೂ, ಇಡೀ ಪ್ರಪಂಚವನ್ನೂ ಆಳುತ್ತಿರುವ ಇನ್ನೊಂದು ಪ್ರಭುತ್ವವಿದೆ. ಅದು ಎಲ್ಲರಿಗೂ ಕಂಡೂ ಕಾಣದಂತೆ ಕೆಲಸ ಮಾಡುತ್ತಿದೆ. ಯಾವ ಪಕ್ಷವೂ ಅದನ್ನು ಕಡೆಗಣಿಸುವಂತಿಲ್ಲ, ಯಾವ ಸಮಾಜವೂ ಅದನ್ನು ಬಿಟ್ಟು ಬಾಳಲಾರದು. ಎಲ್ಲ ಬಗೆಯ ಪ್ರಗತಿಯೂ ಅದನ್ನೇ ಅವಲಂಬಿಸಿದೆ. ಮಾನವ ಚಿಂತನೆಯ ಬಹುಭಾಗ ಅದರ ಹಿಡಿತದಲ್ಲಿದೆ. ಪ್ರಪಂಚದ ಹೆಚ್ಚಿನ ಬುದ್ಧಿಶಕ್ತಿ ಅದರ ಸುಳಿಯಲ್ಲಿ ಸಿಕ್ಕಿಕೊಂಡಿದೆ. ಅದನ್ನು ಇಷ್ಟಪಡದವರೂ ಅದರ ವಶದಲ್ಲಿಯೇ ಇರುವರು. ಅದನ್ನು ವಿರೋಧಿಸುವವರು ತಮ್ಮ ಭಾವನೆಗಳನ್ನು ಪ್ರಚಾರ ಮಾಡಲು ಅದನ್ನೇ ಅವಲಂಬಿಸಬೇಕು. ಅದು ಜೀವನದ ಅವಿಭಾಜ್ಯ ಅಂಗವಾಗಿಬಿಟ್ಟಿದೆ. ಅದರ ಪ್ರಯೋಜನ ಪಡೆದಷ್ಟೂ ಹೆಚ್ಚು ಹೆಚ್ಚು ಅದರ ಗುಲಾಮರಾಗುತ್ತ ಹೋಗುತ್ತೇವೆ. ಅದು ತನ್ನ ಪ್ರಭುತ್ವವನ್ನು ಯಾರಿಗೂ ಅರಿವಾಗದ ರೀತಿಯಲ್ಲಿ ವಿಸ್ತರಿಸುತ್ತಿದೆ. ಅದು ತನ್ನ ಕಬಂಧ ಬಾಹುವಿನಿಂದ ಎಲ್ಲರನ್ನು ಬಾಚಿ ನುಂಗುತ್ತಿದೆ. ಅದರ ಸರ್ವವ್ಯಾಪಿ ಪ್ರಭುತ್ವದಿಂದ ತಪ್ಪಿಸಿಕೊಳ್ಳಲೂ ಅದನ್ನೇ ಆಶ್ರಯಿಸಬೇಕಾಗಿರುವುದರಿಂದ ಅದರ ವ್ಯಾಪ್ತಿಯಿಂದ ದೂರವಾಗುವುದು ದುಸ್ಸಾಧ್ಯವಾಗಿದೆ.

ಇಡೀ ಪ್ರಪಂಚವನ್ನು ಆಳುತ್ತಿರುವ ಈ ಸರ್ವಶಕ್ತ ಪ್ರಭುತ್ವ ಯಾವುದು? ಅದೇ ತಾಂತ್ರಿಕಪ್ರಭುತ್ವ (Technocracy). ಈ ಪದವನ್ನು ಸೃಷ್ಟಿಸಿದವರು ಥಿಯೋಡರ್ ರಜಾಕ್. ನಾವಿಂದು ತಾಂತ್ರಿಕ ಯುಗದಲ್ಲಿ ವಾಸಿಸುತ್ತಿದ್ದೇವೆ. ನಮ್ಮ ದಿನನಿತ್ಯದ ಭೌತಿಕ ಜೀವನ ತಾಂತ್ರಿಕತೆಯನ್ನು ಬಿಟ್ಟಿರುವುದು ಅಸಾಧ್ಯ. ನಮ್ಮ ಬಳಕೆಯ ಪ್ರತಿಯೊಂದು ವಸ್ತುವೂ ತಾಂತ್ರಿಕತೆಯನ್ನು ಅವಲಂಬಿಸಿದೆ. ಪ್ರಾಕೃತಿಕವಾಗಿ ದೊರೆಯುವ ಗಾಳಿ, ನೀರು ಮುಂತಾದುವು ಕೂಡ ಈಗ ತಾಂತ್ರಿಕತೆಯ ಮೂಲಕವೇ ಬರಬೇಕಾಗಿದೆ. ನಮಗೆ ಶುದ್ಧ ನೀರು ಮತ್ತು ಗಾಳಿ ಬೇಕಾದರೆ ತಾಂತ್ರಿಕತೆಯನ್ನು ಅವಲಂಬಿಸಬೇಕು. ನಾವು ತಿನ್ನುವ ಆಹಾರವೂ ತಾಂತ್ರಿಕತೆಯನ್ನು ಅವಲಂಬಿಸಿದೆ. ಸಂಪರ್ಕಮಾಧ್ಯಮವಂತೂ ಸಂಪೂರ್ಣ ತಾಂತ್ರಿಕವಾಗಿದೆ, ಮಾತ್ರವಲ್ಲ ಯಾಂತ್ರಿಕವೂ ಆಗಿದೆ. ಎಲ್ಲ ಬಗೆಯ ಶಿಕ್ಷಣವೂ ಈಗ ತಾಂತ್ರಿಕತೆಯನ್ನು ಅವಲಂಬಿಸಿದೆ—ಕೇವಲ ತಾಂತ್ರಿಕ ಶಿಕ್ಷಣ ಮಾತ್ರವಲ್ಲ. ಸಾಹಿತ್ಯ, ಕಲೆ, ಸಂಗೀತ ಇವೂ ಕೂಡ ತಾಂತ್ರಿಕತೆಯ ಕಪಿಮುಷ್ಟಿಯಲ್ಲಿವೆ.

> ನನ್ನ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯು ತನ್ನ ಸ್ವಂತ ಇಚ್ಛೆ ಮತ್ತು ಬುದ್ಧಿಶಕ್ತಿಯಿಂದ ಪ್ರೇರಿತನಾಗಿ ತಪ್ಪುಮಾಡುವುದು, ಯಂತ್ರದಂತೆ ಒಳ್ಳೆಯದನ್ನು ಮಾಡುವುದಕ್ಕಿಂತ ಮೇಲು. —*ಸ್ವಾಮಿ ವಿವೇಕಾನಂದ.*

ತಾಂತ್ರಿಕ ವಿಧಾನಗಳಿಂದ ಪ್ರೀತಿ, ಅನುಕಂಪೆ, ಕೋಪ ಮುಂತಾದ ಭಾವಗಳನ್ನೂ ಕೆರಳಿಸಬಹುದು. ಸಮಾಧಿಯಂತಹ ಆಧ್ಯಾತ್ಮಿಕ ಅನುಭವಗಳನ್ನೂ ತಾಂತ್ರಿಕ ವಿಧಾನಗಳ ಮೂಲಕ ಪಡೆಯಬಹುದಂತೆ! ನಮ್ಮ ಬೌದ್ಧಿಕ ಚಟುವಟಿಕೆಯೂ ಕೃತಕ ಬುದ್ಧಿಶಕ್ತಿಯನ್ನು (artificial intelligence) ಅವಲಂಬಿಸಿದೆ. ದೇಹದ ವಿವಿಧ ಅಂಗಾಂಗ ಕ್ರಿಯೆಗಳನ್ನೂ ಯಂತ್ರಗಳ ಮೂಲಕ ಮಾಡಿಸಬಹುದು—ಹೃದಯದ ಕ್ರಿಯೆಯನ್ನು ಕೃತಕ ಹೃದಯ ಮಾಡಬಲ್ಲದು, ಮೂತ್ರಕೋಶದ ಕ್ರಿಯೆಯನ್ನು ಯಂತ್ರ ಮಾಡಬಲ್ಲದು, ಮಿದುಳಿನ ಕ್ರಿಯೆಯನ್ನು ಕೃತಕ ಬುದ್ಧಿಶಕ್ತಿ ಮಾಡಬಲ್ಲದು ಇತ್ಯಾದಿ, ಇತ್ಯಾದಿ. ಹೀಗೆ ಮಾನವ ಸಂಪೂರ್ಣ ಯಂತ್ರದಿಂದ ನಿಯಂತ್ರಿತ ಯಂತ್ರ-ಮಾನವನಂತಾಗಬಹುದು—ಅಷ್ಟರವರೆಗೆ ಯುದ್ಧತಂತ್ರ ಅವನನ್ನು ಉಳಿಯಲು ಬಿಟ್ಟರೆ! ಈ ತಾಂತ್ರಿಕ ಪ್ರಭುತ್ವದಿಂದ ಮುಂದೆ ಮಾನವನ ಸ್ಥಿತಿ ಹೇಗಾಗಬಹುದೆಂಬುದರ ಒಂದು ದಾರುಣ ಚಿತ್ರ ಈ ಕೆಳಗಿನಂತಿದೆ:

"೧೯೬೦ರ ದಶಕವು ಮಾನವ ನಿರ್ನಾಮದ ಕೊನೆಯ ಸ್ಫೋಟವನ್ನು ಪ್ರತಿನಿಧಿಸುತ್ತದೆ ಎಂದು ನನ್ನ ಅನಿಸಿಕೆ. ಇದು ಭವಿಷ್ಯ ಸ್ಥಿತಿಯ ಪ್ರಾರಂಭ. ಮುಂದೆ ಏನನ್ನೂ ಭಾವಿಸದ, ಏನನ್ನೂ ಚಿಂತಿಸದ ಮಾನವಯಂತ್ರಗಳು ಸುತ್ತಲೂ ಓಡಾಡುತ್ತಿರುತ್ತವೆ. ಭಾವನೆ ಚಿಂತನೆಗಳಿಂದ ಒಡಗೂಡಿದ ಮಾನವಜಾತಿಯೊಂದು ಇದ್ದಿತೆಂಬುದನ್ನು ನೆನಪಿಸಿಕೊಡಲು ಕೂಡ ಯಾರೂ ಉಳಿದಿರುವುದಿಲ್ಲ. ಆ ಇತಿಹಾಸ, ಆ ಸ್ಮೃತಿ ಈಗ ಅಳಿಸಿಹಾಕಲ್ಪಡುತ್ತಿದೆ. ಭೂಮಿಯ ಮೇಲೆ ಜೀವವಿತ್ತು ಎಂಬ ನೆನಪೇ ಯಾರಿಗೂ ಇರುವುದಿಲ್ಲ" (*ವ್ಯಾಲೇಸ್ ಫೌನ್ ಮತ್ತು ಆಂಡ್ರಿ ಗ್ರಿಗೋರಿ*).

ತಾಂತ್ರಿಕಪ್ರಭುತ್ವದ ಲಕ್ಷಣವನ್ನು ಥಿಯೋಡಾರ್ ರಜಾಕ್ ಹೀಗೆ ನಿರೂಪಿಸುತ್ತಾರೆ: "ಸಮಾಜದಲ್ಲಿ ಆಳುವವರು ತಾಂತ್ರಿಕ ಪರಿಣತರಿಂದ ತಮಗೆ ಸಮರ್ಥನೆಯನ್ನು ಪಡೆಯುತ್ತಾರೆ ಹಾಗೂ ತಾಂತ್ರಿಕ ಪರಿಣತರು ವೈಜ್ಞಾನಿಕ ಜ್ಞಾನದ ಮೂಲಕ ತಮ್ಮನ್ನು ಸಮರ್ಥಿಸಿಕೊಳ್ಳುತ್ತಾರೆ ಮತ್ತು ವಿಜ್ಞಾನವೇ ಆತ್ಯಂತಿಕ

ಪ್ರಮಾಣ. (*The Making of a Counter Culture*, p.8). ತಾಂತ್ರಿಕಪ್ರಭುತ್ವಕ್ಕೆ ವಿಜ್ಞಾನ ಒಂದು ಸಂವಿಧಾನವಿದ್ದಂತೆ. ಹೇಗೆ ಸರ್ಕಾರಗಳು ಸಂವಿಧಾನದಲ್ಲಿ ತಿದ್ದುಪಡಿ ಮಾಡುತ್ತವೆಯೋ, ಹಾಗೆಯೇ ತಾಂತ್ರಿಕ ಪ್ರಭುತ್ವವೂ ತನ್ನ ಅನುಕೂಲಕ್ಕೆ ತಕ್ಕಂತೆ ವಿಜ್ಞಾನವಲ್ಲಿಯೂ ಬದಲಾವಣೆಗಳನ್ನು ಉಂಟುಮಾಡಬಹುದು. ಹೀಗೆ ವಿಜ್ಞಾನವಲ್ಲಿ ಎಷ್ಟೋ ಅವೈಜ್ಞಾನಿಕ ಅಂಶಗಳು ಸೇರಿಕೊಳ್ಳುತ್ತವೆ. ಅವನ್ನೇ ವೈಜ್ಞಾನಿಕ ಮೂಢನಂಬಿಕೆಗಳು ಎಂದು ಕರೆಯುವುದು. ಜನರ ಮಾನಸಿಕ ಸ್ಥಿರತೆಗೆ ನಂಬಿಕೆ—ಮೂಢವೊ ಅಮೂಢವೊ—ಬೇಕೇಬೇಕು.

ಈ ತಾಂತ್ರಿಕಪ್ರಭುತ್ವದ ವಿರುದ್ಧ ಅನೇಕ ಚಳುವಳಿಗಳು—ವಿಶೇಷವಾಗಿ ಯುವಕರ ಚಳುವಳಿಗಳು—ನಡೆದವು ಮತ್ತು ನಡೆಯುತ್ತಲೂ ಇವೆ. ಆದರೆ ಇವುಗಳನ್ನೆಲ್ಲ ತಾಂತ್ರಿಕಪ್ರಭುತ್ವದ ಕೃಷ್ಣವಿವರವು ನುಂಗಿಹಾಕಿತು. ಅದರ ವಿಸ್ತರಣೆಯನ್ನು ತಡೆಗಟ್ಟಲುಹೋದ ಎಷ್ಟೋ ಪಕ್ಷಗಳು ಅದರ ರಥಚಕ್ರಕ್ಕೆ ಬಲಿಯಾದವು. ಅದರ ಮುಖ್ಯ ಅಸ್ತ್ರವೇ ಆರ್ಥಿಕಪ್ರಗತಿ ಮತ್ತು ವಾಣಿಜ್ಯ. ಇವುಗಳ ಮೂಲಕ ಜನರು ಸುಖೀಜೀವನ ನಡೆಸಬಹುದೆಂಬ ಭ್ರಮೆಯನ್ನು ಅದು ಹುಟ್ಟುಹಾಕಿದೆ. ಆದರೆ ಈ ಆರ್ಥಿಕ ಪ್ರಗತಿಯು ಅಭಿವೃದ್ಧ ಮತ್ತು ಅಭಿವೃದ್ಧಿಶೀಲ ದೇಶಗಳೆಂದು ಪ್ರಪಂಚವನ್ನು ಎರಡಾಗಿ ವಿಭಾಗಿಸಿತು, ಶ್ರೀಮಂತ ಮತ್ತು ಬಡವರ ಅಂತರವನ್ನು ಹೆಚ್ಚಿಸಿತು. ಕೆಲವೇ ಜನರು ಈ ಪ್ರಗತಿಯ ಪ್ರಯೋಜನವನ್ನು ಪಡೆಯುವಂತಾಯಿತು. ಬಹುಸಂಖ್ಯಾತರು ತಮ್ಮ ಸಾಂಪ್ರದಾಯಿಕ ಜೀವನೋಪಾಯದ ನೆಲೆಯನ್ನೂ ಕಳೆದುಕೊಂಡು ಹೊಸ ತಾಂತ್ರಿಕತೆಯ ಪ್ರಯೋಜನದಿಂದಲೂ ವಂಚಿತರಾಗಿ ನರಳುತ್ತಿರುವರು. ಎಲ್ಲರಿಗೂ ವಿದ್ಯಾಭ್ಯಾಸ ದೊರೆಯಬೇಕೆಂಬ ಯೋಜನೆಯಿದ್ದರೂ ಕೆಲವರಿಗೆ ಮಾತ್ರ ಉನ್ನತ ಶಿಕ್ಷಣ ದೊರೆಯುವಂತಹ ಸನ್ನಿವೇಶ ನಿರ್ಮಿತವಾಗಿದೆ. ಇದರಿಂದ ವಿದ್ಯಾವಂತ ಮತ್ತು ಅವಿದ್ಯಾವಂತರ ಅಂತರ ಅಧಿಕವಾಗುತ್ತಿದೆ. ಔಷಧಿ ಮತ್ತು ಚಿಕಿತ್ಸಾ ವಿಧಾನಗಳು ಅಭೂತಪೂರ್ವ ರೀತಿಯಲ್ಲಿ ಬೆಳೆಯುತ್ತಿದ್ದರೂ ರೋಗಿಗಳ ಸಂಖ್ಯೆ ದಿನ ದಿನವೂ ವೃದ್ಧಿಯಾಗುತ್ತಿದೆ. ಊಹೆಗೂ ಮೀರಿದಂತೆ ಸುಖ ಸಾಧನಗಳು ಬೆಳೆಯುತ್ತಿದ್ದಂತೆಯೇ ಅಸುಖಿಗಳ ಸಂಖ್ಯೆಯೂ ಅಧಿಕವಾಗುತ್ತಿದೆ. ಇಡೀ ಜಗತ್ತನ್ನು ಒಂದುಗೂಡಿಸಿ ವಿಶ್ವಕುಟುಂಬವನ್ನು ನಿರ್ಮಿಸುವ ಪ್ರಯತ್ನದಲ್ಲಿ ಒಡಕು ಕುಟುಂಬಗಳು ಬೆಳೆಯುತ್ತಿವೆ. ರಾಜಕೀಯ ಪಕ್ಷಗಳು ಚುನಾವಣೆಯ ಭರವಸೆಗಳನ್ನು (manifesto) ನೀಡಿ ಅವಾವುದನ್ನೂ ಕಾರ್ಯರೂಪಕ್ಕೆ ತರದಿರುವಂತೆ, ತಾಂತ್ರಿಕಪ್ರಭುತ್ವದ ಎಲ್ಲ ಭರವಸೆಗಳೂ ಹುಸಿಯಾಗುತ್ತಿವೆ. ಆದರೂ ಅದನ್ನು ಬಿಟ್ಟುಬಿಡುವ ಸ್ಥಿತಿಯಲ್ಲಿಲ್ಲ. ಎಲ್ಲ ಪ್ರಾಕೃತಿಕ ಸಂಪತ್ತನ್ನೂ ಧ್ವಂಸಗೊಳಿಸಿ, ಎಲ್ಲ ವಾತಾವರಣವನ್ನೂ ಕಲುಷಿತಗೊಳಿಸಿ ಬೇರೆ ಭರವಸೆಗಳಿಂದಲೂ ನಮ್ಮನ್ನು ವಂಚಿತರನ್ನಾಗಿ ಮಾಡಿ, ಈಗ ನಮ್ಮ ಅತಂತ್ರ ಸ್ಥಿತಿಯನ್ನು ನೋಡಿ ಅದು ನಗುತ್ತಿರುವಂತಿದೆ—ಪ್ರಳಯ ನರ್ತನದಲ್ಲಿ ಅದು ತೊಡಗಿರುವಂತಿದೆ.

ತಾಂತ್ರಿಕಪ್ರಭುತ್ವವು ಮಾನವ ಜೀವನವನ್ನು ಅರ್ಥಹೀನವನ್ನಾಗಿಸುತ್ತದೆ. ಯಂತ್ರದ ಮುಂದೆ ಮಾನವನು ಒಂದು ಬಿಗ್ಮಿಯಾಗುತ್ತಾನೆ, ಅಸಹಾಯಕನಾಗುತ್ತಾನೆ ಮತ್ತು ತನ್ನ ಅರ್ಥವನ್ನೆ ಕಳೆದುಕೊಳ್ಳುತ್ತಾನೆ. ಸರ್ವಶಕ್ತವಾದ ಯಂತ್ರ "ನೀನಾರಿಗಾದೆಯೋ ಎಲೆ ಮಾನವ" ಎಂದು ಮೂದಲಿಸುತ್ತದೆ. ಭೌತಿಕ, ಬೌದ್ಧಿಕ, ಭಾವನಾತ್ಮಕ ಎಲ್ಲ ಕೆಲಸವನ್ನೂ ಯಂತ್ರಕ್ಕೇ ವಹಿಸಿ ಮಾನವನು ಯಂತ್ರದ ಕೈಗೊಂಬೆಯಾಗಿದ್ದಾನೆ. ಅವನು ಯಂತ್ರವನ್ನು ನಡೆಸುತ್ತಿರುವಂತೆ ಕಂಡುಬಂದರೂ ನಿಜವಾಗಿ ಅವನನ್ನೇ ಯಂತ್ರ ನಡೆಸುತ್ತಿದೆ—ಸವಾರನನ್ನು ಕುದುರೆ ತನಗಿಷ್ಟ ಬಂದೆಡೆ ಕರೆದುಕೊಂಡು ಹೋಗುವ ಹಾಗೆ. ಮಾನವನು ಮಂತ್ರಮುಗ್ಧನಾಗಿ ಯಂತ್ರದ ತಂತ್ರಕ್ಕೆ ಬಲಿಯಾಗಿಬಿಟ್ಟಿದ್ದಾನೆ. ಈ ಅಸಹಾಯಕತೆ, ಅರ್ಥಹೀನತೆಯಿಂದಾಗಿ, ಮಾನವನು ತನ್ನ ಜೀವನವನ್ನೇ ಗೌರವಿಸುವುದಿಲ್ಲ. ಅವನಿಗರಿವಿಲ್ಲದಂತೆಯೇ ತನ್ನ ಬಗ್ಗೆಯೇ ತಿರಸ್ಕಾರ ಭಾವ ಉಂಟಾಗುತ್ತದೆ. ಈ ತುಚ್ಛೀಕರಣ ಅನೇಕ ಅನರ್ಥಗಳಿಗೆ ಕಾರಣವಾಗುತ್ತದೆ. ಅವನಿಗೆ ಎಷ್ಟೇ ಸುಖಸಾಧನಗಳಿದ್ದರೂ ಅವನು ಜೀವನದಲ್ಲಿ ಸುಖವನ್ನು ಕಾಣಲಾರ. ಒಂದು ಕಡೆ ಸುಖಸಾಧನಗಳಿಲ್ಲದೆ ಜನರು ದುಃಖಪಡುತ್ತಾರೆ, ಇನ್ನೊಂದು ಕಡೆ ಅವುಗಳಿದ್ದೂ ದುಃಖಪಡುತ್ತಾರೆ. ಹೀಗೆ ತಾಂತ್ರಿಕ ಪ್ರಭುತ್ವವು ಸುಖದ ಭರವಸೆಯನ್ನು ನೀಡಿ ಎಲ್ಲರನ್ನೂ ದುಃಖದಲ್ಲಿ ಮುಳುಗಿಸುತ್ತಿದೆ. ಗಾಣಕ್ಕೆ ಕಟ್ಟಿದ ಎತ್ತು ತನಗೆಟುಕದ ಹುಲ್ಲಿನ ಆಸೆಯಿಂದ ಮುಂದೆ ಸಾಗುತ್ತ ಗಾಣವನ್ನು ನಡೆಸುವಂತೆ ನಾವು ಸುಖದ ಭರವಸೆಯಿಂದ ಮುಂದೆ ಸಾಗುತ್ತ ಈ ತಾಂತ್ರಿಕಪ್ರಭುತ್ವದ ಯಂತ್ರವನ್ನು ನಡೆಸುತ್ತಿದ್ದೇವೆ.

> ಮಾಡುವುದು ಮತ್ತು ನೋಡುವುದು ಯಾವುದೂ ಇಲ್ಲದಿದ್ದರೆ ಒಂದು ವಸ್ತುವಾಗಲಿ, ವ್ಯಕ್ತಿಯಾಗಲಿ ಅರ್ಥಹೀನವಾಗುತ್ತದೆ — ಅಪ್ರಸ್ತುತವಾಗುತ್ತದೆ.

ಈ ತಾಂತ್ರಿಕಪ್ರಭುತ್ವ ಉಳಿಯಬೇಕಾದರೆ ತಾಂತ್ರಿಕತೆ ಬೆಳೆಯುತ್ತ ಹೋಗಬೇಕು. ಅದು ಬೆಳೆಯಬೇಕಾದರೆ ಹೆಚ್ಚು ಹೆಚ್ಚು ಗ್ರಾಹಕ ವಸ್ತುಗಳನ್ನು ಉತ್ಪಾದಿಸಬೇಕು. ಆ ವಸ್ತುಗಳ ಮಾರಾಟಕ್ಕಾಗಿ ವಾಣಿಜ್ಯ ಬೆಳೆಯಬೇಕು. ಅದು ಬೆಳೆಯಬೇಕಾದರೆ ಜನರ ಕೊಂಡುಕೊಳ್ಳುವ ಸಾಮರ್ಥ್ಯ ವೃದ್ಧಿಸಬೇಕು, ಮತ್ತು ಅದಕ್ಕನುಗುಣವಾಗಿ ಅವರ ಆಸೆಯೂ ವೃದ್ಧಿಯಾಗುತ್ತಾ ಹೋಗಬೇಕು. ಅವರ ಆಸೆ ವೃದ್ಧಿಸಿದಂತೆಲ್ಲ ವಸ್ತುಗಳ ಉತ್ಪತ್ತಿ ಅಧಿಕವಾಗಬೇಕು ಮತ್ತು ಅದಕ್ಕನುಗುಣವಾಗಿ ತಾಂತ್ರಿಕತೆ ಬೆಳೆಯಬೇಕು. ಅದು ಬೆಳೆದಂತೆಲ್ಲ ಪ್ರಾಕೃತಿಕ ಸಂಪತ್ತು ಕಡಮೆಯಾಗುತ್ತ ಬರುತ್ತದೆ ಮತ್ತು ವಾತಾವರಣ ಕಲುಷಿತವಾಗುತ್ತದೆ. ಇದರ ದುಷ್ಪರಿಣಾಮಕ್ಕೆ ಹೆಚ್ಚಾಗಿ ಬಲಿಯಾಗುವವರು ತಾಂತ್ರಿಕತೆಯ ಲಾಭದಿಂದ ವಂಚಿತರಾದ ಬಡವರು. ಅವರು ಅಲ್ಪದರಲ್ಲಿಯೇ ಸಂತೃಪ್ತಿಯಿಂದ ಬಾಳುವ ಅವಕಾಶವನ್ನೂ

ಕಳೆದುಕೊಳ್ಳುತ್ತಿದ್ದಾರೆ. ಏಕೆಂದರೆ ಈ ತಾಂತ್ರಿಕ ಪ್ರಭುತ್ವದಲ್ಲಿ ಯಾರೂ ಸ್ವತಂತ್ರವಾಗಿ ಸುಖದಿಂದಿರಲು ಸಾಧ್ಯವಿಲ್ಲ. ಅದು ಎಲ್ಲರನ್ನೂ ಅತ್ಯಂತ ಪರಾವಲಂಬಿಗಳಾಗಿ ಬಾಳುವ ದಾರುಣ ಸ್ಥಿತಿಗೆ ಇಳಿಸುತ್ತದೆ. ಅದು ಶ್ರೀಮಂತರನ್ನು ಸುಖದ ಮರೀಚಿಕೆಯಿಂದ ವಂಚಿಸುತ್ತದೆ ಮತ್ತು ಬಡವರ ಸ್ವಾಭಾವಿಕ ಸುಖವನ್ನೂ ದೋಚುತ್ತದೆ.

ಈ ತಾಂತ್ರಿಕ ದಬ್ಬಾಳಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವೇ? ನಾವು ತಾಂತ್ರಿಕತೆಯಿಂದ ಸಂಪೂರ್ಣ ಮುಕ್ತರಾಗಲಾರೆವು. ಮಾನವ ಯಾವಾಗ ಉಪಕರಣಗಳನ್ನು ಉಪಯೋಗಿಸಲು ಪ್ರಾರಂಭಿಸಿದನೋ ಅಂದಿನಿಂದಲೇ ತಾಂತ್ರಿಕತೆ ಪ್ರಾರಂಭವಾಗಿದೆ, ಅದು ಬೇರೆ ಬೇರೆ ರೂಪವನ್ನು ಪಡೆದಿದೆ ಅಷ್ಟೆ. ಆದ್ದರಿಂದ ತಾಂತ್ರಿಕತೆ ಮಾನವ ಜೀವನದ ಅವಿಭಾಜ್ಯ ಅಂಗ. ಆದರೆ ಅದು ನಮ್ಮನ್ನು ಆಳುವುದಕ್ಕೆ ಬಿಡದೆ ನಾವು ಅದನ್ನು ಆಳುವಂತಾಗಬೇಕು. ಹಾಗಾಗಬೇಕಾದರೆ ನಮ್ಮನ್ನು ನಾವು ಮೊದಲು ಆಳುವಂತಾಗಬೇಕು. ನಮಗೆ ನಾವೇ ಗುಲಾಮರಾದಾಗ ಹೊರಗಿನ ಎಲ್ಲದಕ್ಕೂ ನಾವು ಗುಲಾಮರಾಗುತ್ತೇವೆ.

ನಮ್ಮನ್ನು ನಾವು ಆಳುವುದೆಂದರೇನು? ನಮ್ಮ ಆಸೆಗಳು, ಭಾವನೆಗಳು ಮತ್ತು ಆಲೋಚನೆಗಳು ಇವುಗಳ ವಶರಾಗದೆ, ಇವುಗಳನ್ನು ನಮ್ಮ ನಿಯಂತ್ರಣದಲ್ಲಿ ಇರಿಸುವುದು. ಆಸೆಯೇ ದುಃಖಕ್ಕೆ ಕಾರಣ ಎಂದು ಬುದ್ಧ ಮುಂತಾದ ಸಂತಶ್ರೇಷ್ಠರೆಲ್ಲರೂ ಹೇಳುತ್ತಾ ಬಂದಿದ್ದಾರೆ. ಆದರೆ ತಾಂತ್ರಿಕ ತತ್ತ್ವದ ಪ್ರಕಾರ ಆಸೆಗಳ ಪೂರೈಕೆಯೇ ಸುಖ, ಹೆಚ್ಚು ಆಸೆಗಳು ಪೂರೈಕೆಯಾದಷ್ಟೂ ಹೆಚ್ಚು ಸುಖ ಮತ್ತು ನಮ್ಮ ಆಸೆಗಳ ಪೂರೈಕೆಗೆ ಬೇಕಾದುದನ್ನೆಲ್ಲ ತಾಂತ್ರಿಕತೆ ಒದಗಿಸುತ್ತದೆ. ಈ ಭರವಸೆ ಹುಸಿಯಾಗಿರುವುದಕ್ಕೆ ಇಂದಿನ ಸಾಮಾಜಿಕ ಪರಿಸ್ಥಿತಿಯೇ ಸಾಕ್ಷಿ. ಈಗ ಮತ್ತೆ ಪುರಾತನ ವಿವೇಕವನ್ನು ಆಶ್ರಯಿಸಬೇಕಾಗಿದೆ. ಅದೇ ಯಯಾತಿಯ ಪ್ರಸಿದ್ಧ ಹೇಳಿಕೆ:

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

"ಆಸೆಗಳ ಪೂರೈಕೆಯಿಂದ ಅವುಗಳು ತಣ್ಣಗಾಗುವುದಿಲ್ಲ. ಅಗ್ನಿಗೆ ಹವಿಸ್ಸನ್ನು ಸುರಿದಷ್ಟೂ ಅದು ವೃದ್ಧಿಯಾಗುವಂತೆ ಆಸೆಗಳೂ ವೃದ್ಧಿಯಾಗುತ್ತವೆ." ಆಸೆಗಳು ಒಂದು ರೀತಿಯ ಮಾನಸಿಕ ಮತ್ತು ನರ ಬಿಗಿತ (tension). ಒಂದು ಆಸೆ ಪೂರೈಕೆಯಾದಾಗ ಬಿಗಿತ ನಿವಾರಣೆಯಾಗುತ್ತದೆ. ಅದನ್ನೇ ನಾವು ಸುಖವೆಂದು ಕರೆಯುವುದು. ಆದರೆ ಇದು ತಾತ್ಕಾಲಿಕ—ಆಸೆಗಳ ಅವಧಿಗಿಂತ ಕಡಮೆ ಸಮಯದ್ದು ಮತ್ತು ಎಲ್ಲ ಆಸೆಗಳನ್ನೂ ಪೂರೈಸುವುದು ಅಸಂಭವ. ಆದ್ದರಿಂದ ಆಸೆಗಳ ಹೆಚ್ಚಳದಿಂದ ದುಃಖ ಅಧಿಕವಾಗುತ್ತದೆ. ಆಸೆಗಳ ಪೂರೈಕೆಗೆ ಹಣ ಅಗತ್ಯ. ಇಂದು ಬಾಯಾರಿಕೆ ನೀಗಿಸಿಕೊಳ್ಳಲೂ ಹಣ ಬೇಕು! ಆಸೆಗಳು ಹೆಚ್ಚಾದಷ್ಟೂ ಹಣ ಹೆಚ್ಚು ಬೇಕಾಗುತ್ತದೆ. ಮುಂದೆ ಆಸೆಗಳ ಪೂರೈಕೆಗಿಂತ ಹಣ ಮಾಡುವುದೇ ಪ್ರಧಾನವಾಗುತ್ತದೆ. ಇದು ಸ್ಪರ್ಧೆಗೆ ನಾಂದಿಯಾಗುತ್ತದೆ. ಇದರಿಂದ ಬಿಗಿತ ಇನ್ನೂ ಜಾಸ್ತಿಯಾಗುತ್ತದೆ. ಪೂರೈಕೆಯಾಗದ ಆಸೆಗಳ ಬಿಗಿತದೊಂದಿಗೆ ಇದೂ ಸೇರಿಕೊಂಡು ಜೀವನ ದುಃಖಮಯವಾಗುತ್ತದೆ. ಆದ್ದರಿಂದ ಆಸೆಗಳ ನಿಗ್ರಹದ ಮೂಲಕ ನಾವು ತಾಂತ್ರಿಕಪ್ರಭುತ್ವದ ಪ್ರಭಾವವನ್ನು ಹ್ರಸ್ವಗೊಳಿಸಬಹುದು.

ಸುಖದ ಇನ್ನೊಂದು ಮೂಲ ಉತ್ತಮ ಮಾನವೀಯ ಸಂಬಂಧ —ತಾಂತ್ರಿಕತೆಯಲ್ಲ. ತಾಂತ್ರಿಕತೆ ಮನುಷ್ಯ ಮನುಷ್ಯರನ್ನು ದೂರ ಸರಿಸುತ್ತದೆ. ಹತ್ತಿರವಿದ್ದರೂ ಯಾವುದೇ ಭಾವನಾತ್ಮಕ ಸಂಬಂಧವಿರುವುದಿಲ್ಲ. ಪ್ರೀತಿ ಮತ್ತು ಸ್ನೇಹದಿಂದ, ಪರಸ್ಪರ ಕಲೆತು ಮಾತನಾಡುವುದರ ಮೂಲಕ, ಪರಸ್ಪರ ಸಹಕಾರದ ಮೂಲಕ ಮಾನವೀಯ ಸಂಬಂಧ ಉತ್ತಮವಾಗುತ್ತದೆ. ಇದು ಬಿಗಿತವನ್ನು ನಿವಾರಿಸಿ ಸುಖವನ್ನು ಹೆಚ್ಚಿಸುವುದು. ನಾವು ಸುಖಕ್ಕಾಗಿ ಮನರಂಜನಾ ಕಾರ್ಯಕ್ರಮಗಳಿಗೆ ಮೊರೆಹೋಗುತ್ತೇವೆ ಮತ್ತು ಮಾನವೀಯ ಸಂಬಂಧವನ್ನು ಕಡೆಗಣಿಸುತ್ತೇವೆ. ಆದರೆ ಉತ್ತಮ ಮಾನವೀಯ ಸಂಬಂಧವು ನೀಡುವ ಸುಖವನ್ನು ಯಾವ ಮನರಂಜನಾ ಕಾರ್ಯಕ್ರಮವೂ ನೀಡಲಾರದು. ಉತ್ತಮ ಮಾನವೀಯ ಸಂಬಂಧದ ಜೊತೆಗೆ ಹಿತಮಿತವಾಗಿ ಮನರಂಜನೆಯೂ ಇದ್ದರೆ ಅದು ಒಳ್ಳೆಯದು. ಇದಕ್ಕೆ ನಮ್ಮ ಭಾವೋದ್ವೇಗಗಳ (emotions) ನಿಗ್ರಹ ಮತ್ತು ಸಮತೋಲ ಅವಶ್ಯಕ. ಕಾಮ ಕ್ರೋಧಾದಿ ನಿಷೇಧಾತ್ಮಕ ಭಾವಗಳನ್ನು ನಿಗ್ರಹಿಸಿ ಪ್ರೀತಿ, ದಯೆ ಮುಂತಾದ ಸಕಾರಾತ್ಮಕ ಭಾವಗಳನ್ನು ರೂಢಿಸಿಕೊಳ್ಳಬೇಕು.

ಇದೆಲ್ಲಕ್ಕಿಂತ ಮುಖ್ಯವಾಗಿ ಅಂತರಂಗದಲ್ಲಿಯೇ ಸುಖವನ್ನು ಕಾಣುವಂತಾದರೆ ಆಗ ಎಲ್ಲವೂ ಸುಖಮಯವಾಗುತ್ತದೆ. ಮಾನವ ಹೊರಗಿನ ಯಾವ ಪ್ರಭುತ್ವಕ್ಕೂ ದಾಸನಾಗಬೇಕಿಲ್ಲ. ಗೀತೆಯು ಹೇಳುವಂತೆ, "ಅವನು ಆತ್ಮರತಿ, ಆತ್ಮತೃಪ್ತ ಮತ್ತು ತನ್ನಲ್ಲೇ ಅವನು ಸಂತೋಷವನ್ನು ಕಾಣುತ್ತಾನೆ." ಓರ್ವ ಬೌದ್ಧ ಸಂನ್ಯಾಸಿ ಹೀಗೆ ಹೇಳುತ್ತಾರೆ: **"ಒಂದು ಗಂಟೆಯ ಸುಖ ಬೇಕಾದರೆ ನಿದ್ರೆ ಮಾಡಬೇಕು; ಒಂದು ದಿನದ ಸುಖ ಬೇಕಾದರೆ ಮಾರ್ಕೆಟಿಗೆ ಹೋಗಿ ಮನಬಂದಂತೆ ಖರೀದಿಸಬೇಕು; ಒಂದು ತಿಂಗಳ ಸುಖ ಬೇಕಾದರೆ ಮಧುಚಂದ್ರಕ್ಕೆ ಹೋಗಬೇಕು; ಒಂದು ವರ್ಷದ ಸುಖ ಬೇಕಾದರೆ ಪಿತ್ರಾರ್ಜಿತ ಆಸ್ತಿಯನ್ನು ಪಡೆಯಬೇಕು; ಇಡೀ ಜೀವನ ಸುಖವಾಗಿರಬೇಕಾದರೆ ಇತರರಿಗೆ ಸಹಾಯ ಮಾಡಬೇಕು ಮತ್ತು ಶಾಶ್ವತ ಸುಖ ಬೇಕಾದರೆ ನಿಮ್ಮನ್ನು ನೀವು ಅರಿಯಬೇಕು."** ನಮ್ಮನ್ನು ನಾವು ಅರಿಯುವುದೇ ಧರ್ಮ. ಯಾರು ಸುಖಜೀವನ ನಡೆಸಬಲ್ಲರು ಎಂಬುದನ್ನು ಈ ಕೆಳಗಿನ ಶ್ಲೋಕ ವಿವರಿಸುತ್ತದೆ:

ಸುಖಂ ಶೇತೇ ಸತ್ಯವಕ್ತಾ ಸುಖಂ ಶೇತೇ ಮಿತವ್ಯಯೀ ।
ಹಿತಭುಕ್ ಮಿತಭುಕ್ ಚೈವ ತಥೈವ ವಿಜಿತೇಂದ್ರಿಯಃ ॥

"ಸತ್ಯವನ್ನು ನುಡಿಯುವವನೂ ಮಿತವ್ಯಯಿಯೂ ಹಿತಮಿತವಾಗಿ ಉಣ್ಣುವವನೂ ಇಂದ್ರಿಯಜಯಿಯೂ ಸುಖವಾಗಿ ನಿದ್ರಿಸುತ್ತಾನೆ." ◆